ವಿವರವಾದ ಯೋಜನಾ ವರದಿ (ಡಿಪಿಆರ್) ಅನ್ನು ತಯಾರಿಸಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೆಬ್ರಿ–ಆಗುಂಬೆ ಘಾಟಿ ಮೂಲಕ ರಾಷ್ಟ್ರೀಯ ಹೆದ್ದಾರಿ–17 ಹಾಗೂ ರಾಷ್ಟ್ರೀಯ ಹೆದ್ದಾರಿ–13ನ್ನು ಸಂಪರ್ಕಿಸುವ ಉಡುಪಿ–ತೀರ್ಥಹಳ್ಳಿ ರಸ್ತೆಯ ಅಭಿವೃದ್ಧಿಗಾಗಿ ರೂ.134.00 ಕೋಟಿಗಳ ರೇಖಾ ಅಂದಾಜು ಪ್ರಸ್ತಾವನೆಯು ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ನೀಡುವ ಸೀಮಿತ ಕೇಂದ್ರ ರಸ್ತೆ ನಿಧಿ (ಸಿಆರ್ಎಫ್)/ಆರ್ಥಿಕ ಪ್ರಾಮುಖ್ಯತೆ(ಇಐ)/ಅಂತರ್ ರಾಜ್ಯ ಸಂಪರ್ಕ ಯೋಜನೆ (ಐಎಸ್ಸಿ) ಅನುದಾನದಲ್ಲಿ ಶಿಫಾರಸ್ಸು ಮಾಡಿದ ಅಗತ್ಯ ಕಾಮಗಾರಿಗಳ ಪ್ರಸ್ತಾವಿತ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ.

ರಸ್ತೆ ಹಾಳಾಗಿರುವುದು

41 : (400)

ಶ್ರೀ ಖಾದರ್ ಯು.ಟಿ. (ಮಂಗಳೂರು)

ಪ್ರಶ್ನೆ

ಅ) ಬೆಂಗಳೂರು–ಧರ್ಮಸ್ಥಳ–ಮಂಗಳೂರು ಶಿರಾಡಿಘಾಟ್ ರಸ್ತೆ ಸಂಚಾರಕ್ಕೆ ಯೋಗ್ಯವಲ್ಲದೇ ಇರುವುದು ನಿಗವೇ;

ಆ) ಹಾಗಿದ್ದಲ್ಲಿ, ಶಿರಾಡಿಘಾಟ್ ರಸ್ತೆಯನ್ನು ಶಾಶ್ವತವಾಗಿ ದುರಸ್ಥಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಅಪೆಂಡಿಕ್ಸ್–ಇ ಯಲ್ಲಿ ನೀಡಿರುವ ಹಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ ವೆಚ್ಚ ಮಾಡಲಾಗಿದೆಯೇ? ವಿವರ ಒದಗಿಸುವುದು;

ಶ್ರೀ ಸಿ. ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು)

ಉತ್ತರ

ಅ) ಬೆಂಗಳೂರು–ಧರ್ಮಸ್ಥಳ–ಮಂಗಳೂರು ಶಿರಾಡಿಘಾಟ್ ರಸ್ತೆಯಲ್ಲಿ ಹಾಸನದಿಂದ ಶಿರಾಡಿಘಾಟ್ ಮೂಲಕ ಪೆರಿಯಶಾಂತಿವರೆಗೆ (ರಾ.ಹೆ.48ರ ಕಿ.ಮೀ. 189.50 ರಿಂದ 278.50 ರವರೆಗೆ), ಉಜಿರೆಯಿಂದ ಬಿ.ಸಿ.ರೋಡ್ (ರಾ.ಹೆ.234ರ ಕಿ.ಮೀ. 61.50 ರಿಂದ 19.80 ರವರೆಗೆ), ಬಿ.ಸಿ.ರೋಡ್‌ನಿಂದ ಪೆರಿಯಶಾಂತಿವರೆಗಿನ ರಸ್ತೆಯು (ರಾ.ಹೆ.48ರ ಕಿ.ಮೀ. 328.00 ರಿಂದ ಕಿ.ಮೀ. 278.50ವರೆಗೆ) ರಾಷ್ಟ್ರೀಯ ಹೆದ್ದಾರಿ ವಲಯದ ವ್ಯಾಪ್ತಿಯಲ್ಲಿರುತ್ತದೆ.

ಪ್ರಸ್ತಾಪಿಸಿರುವ ರಸ್ತೆಯ ಭಾಗವಾದ ಪೆರಿಯಶಾಂತಿ–ಧರ್ಮಸ್ಥಳ–ಉಜಿರೆ ರಸ್ತೆಯು ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿದ್ದು ವಾಹನ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿದೆ. ಬೆಂಗಳೂರಿನಿಂದ ಹಾಸನ ಮತ್ತು ಬಿ.ಸಿ.ರೋಡ್‌ನಿಂದ್ ಮಂಗಳೂರುವರೆಗಿನ ರಸ್ತೆಯು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುತ್ತದೆ. ಶಿರಾಡಿ ಘಾಟ್ ಭಾಗವು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ:48 ರಲ್ಲಿದ್ದು, ಈ ಸಾಲಿನ ಮಳೆಗಾಲದಲ್ಲಿ ರಸ್ತೆಗಳಲ್ಲಿ ಗುಂಡಿ ಉಂಟಾಗಿದ್ದು, ಶಿರಾಡಿ ಘಾಟ್ ಭಾಗದಲ್ಲಿ ವೆಟ್ ಮಿಕ್ಸ್ ತುಂಬುವ ಮೂಲಕ ಗುಂಡಿಗಳನ್ನು ತಾತ್ಕಾಲಿಕವಾಗಿ ತುಂಬುವ ಕ್ರಮ ತೆಗೆದುಕೊಂಡಿದ್ದು, ಇದೀಗ 15 ನವೆಂಬರ್ 2012ರ ನಂತರದಲ್ಲಿ ವಾರ್ಷಿಕ ನಿರ್ವಹಣೆ ಅಡಿಯಲ್ಲಿ ಬಿಟುಮಿನ್ ಮಿಕ್ಸ್ ಉಪಯೋಗಿಸಿ ತಗ್ಗು ಗುಂಡಿಗಳನ್ನು ತುಂಬಿ ಸರಿಪಡಿಸುವ ಕೆಲಸವನ್ನು ಕೈಗೊಂಡಿದ್ದು, ಪ್ರಗತಿಯಲ್ಲಿದ್ದು. ಡಿಸೆಂಬರ್ 2012ರ ಅಂತ್ಯದ ಒಳಗೆ ಪೂರ್ಣಗೊಳಿಸಲಾಗುವುದು. ಉಳಿದ ಭಾಗದ ರಸ್ತೆಯು ಸಂಚಾರ ಯೋಗ್ಯವಾಗಿದೆ.

ಆ) ರಾಷ್ಟ್ರೀಯ ಹೆದ್ದಾರಿ–48 ಹಾಸನದಿಂದ ಮಂಗಳೂರು ವರಗಿನ ರಸ್ತೆಯನ್ನು NHAI ವತಿಯಿಂದ ಅಭಿವೃದ್ಧಿ ಪಡಿಸುವುದಕ್ಕಾಗಿ ಈಗಾಗಲೇ ಗುರುತಿಸಲಾಗಿದ್ದು, ಕಿ.ಮೀ. 237.00 ರಿಂದ 263.00ರವರೆಗಿನ ಭಾಗವು ರಾ.ಹೆ–48ರ ಶಿರಾಡಿ ಘಾಟ್‌ನಲ್ಲಿದ್ದು, ಈ ಭಾಗದ ರಸ್ತೆಯನ್ನು ಅಭಿವೃದ್ಧಿಗೊಳಿಸುವುದು ಒಳಗೊಂಡಿರುತ್ತದೆ.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹಾಸನದಿಂದ ಬಿ.ಸಿ.ಕ್ರಾಸ್‌ವರೆಗೆ (ಸರಪಳಿ 189.50 ರಿಂದ 328.00ವರೆಗೆ) ನಾಲ್ಕು ಪಥದ ರಸ್ತೆಗೆ "Conducting of Preparation of Feasibility-cum-Preliminary Project Report for Widening to 4/6 laning of Hassan-Bantwal section (BC Road) of NH-48 to be executed on DBFO Patern"ರಂತೆ ಯೋಜನಾ ವರದಿ ತಯಾರಿಸುವ ಪ್ರಕ್ರಿಯೆ ಪ್ರಾರಂಭಿಸಲಾಗಿರುವುದಾಗಿ ತಿಳಿದು ಬಂದಿರುತ್ತದೆ. ಇದಾದನಂತರ ಮೂಲ ಕಾಮಗಾರಿಯನ್ನು 2013–14 ಸಾಲಿನಲ್ಲಿ ಕೈಗೊಳ್ಳುವ ಸಾಧ್ಯತೆ ಇರುವುದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ತಿಳಿಸಿರುತ್ತಾರೆ.

ಆದಾಗ್ಯೂ ಶಿರಾಡಿಘಾಟ್ ರಸ್ತೆಯನ್ನು ವಾಹನಗಳ ಓಡಾಟಕ್ಕೆ ಯೋಗ್ಯವಾಗಿರಿಸಲು ಪ್ರಸಕ್ತ ಸಾಲಿನಲ್ಲಿ ಲಭ್ಯವಿರುವ ವಾರ್ಷಿಕ ನಿವರ್ಹಣೆ ಅನುದಾನದಲ್ಲಿ ಕ್ರಮ ಕೈಗೊಳ್ಳಲಾಗಿದೆ. ಹಾಗೂ ಸದರಿ ರಸ್ತೆಯ ಮೇಲ್ಮೈಯನ್ನು

ಸುಧಾರಿಸುವ ಕಾಮಗಾರಿಗಾಗಿ ರೂ.31.92 ಕೋಟಿ ಮೊತ್ತದ ಅಂದಾಜು ಪತ್ರಿಕೆಗಳನ್ನು ಅನುಮೋದನೆಗಾಗಿ ಕೇಂದ್ರ ಭೂ ಸಾರಿಗೆ ಮಂತ್ರಾಲಯ, ನವದೆಹಲಿಗೆ ಸಲ್ಲಿಸಲಾಗುತ್ತಿದ್ದು ಇವುಗಳ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ 2012–13ನೇ ಸಾಲಿನ ಅಪೆಂಡಿಕ್ಸ್ ಇ ನಲ್ಲಿ ಒಟ್ಟು 140 ರಸ್ತೆ ಕಾಮಗಾರಿಗಳನ್ನು ಅಂದಾಜು ಮೊತ್ತ ರೂ.14806.17 ಲಕ್ಷಗಳಲ್ಲಿ ತೆಗೆದುಕೊಂಡಿದ್ದು, ಇದಕ್ಕೆದುರಾಗಿ ರೂ.1327.30 ಲಕ್ಷ ಅನುದಾನ ಹಂಚಿಕೆಯಾಗಿದ್ದು, ನವೆಂಬರ್ 2012 ರವರೆಗೆ ರೂ.1406.45 ಲಕ್ಷ ಹಣ ಬಿಡುಗಡೆಯಾಗಿದ್ದು, ರೂ.1400.45 ಲಕ್ಷ ವೆಚ್ಚವಾಗಿರುತ್ತದೆ. ಲೆಕ್ಕ ಶೀರ್ಷಿಕೆವಾರು ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಅನುಬಂಧ–1

ಘೋಷ್ವಾರೆ

ಎಲ್.ಎ.ಕ್ಯೂ.ಸಂಖ್ಯೆ 400ಕ್ಕೆ ವಿವರ

ಕ್ರ. ಸಂ.	ವೈಶಿಷ್ಟ್ಯೀಕೆ	ಕಾಮಗಾರಿ ಸಂಖ್ಯೆ	ಅಂದಾಜು ಮೊತ್ತ	ಯೋಚಿತ ಉದ್ದ(ಕಿ.ಮೀ.ಗಳಲ್ಲಿ)	ಅಭಿವೃದ್ಧಿ ಪಡಿಸಲಾದ ಉದ್ದ (ಕಿ.ಮೀ.ಗಳಲ್ಲಿ)	2012–13ನೇ ಸಾಲಿಗೆ ಹಂಚಿಕೆಯಾದ ಅನುದಾನ	2012–13ನೇ ಸಾಲಿಗೆ ಬೇಕಾಗಿರುವ ಹೆಚ್ಚುವರಿ ಅನುದಾನ	ಪ್ರಸಕ್ತ ಸಾಲಿನ ವೆಚ್ಚ
1	2	3	4	5	6	7	8	9
1	5054-03-337-0-17-154-(PLAN)-Improvements	16	3913.21	73.75	31.30	191.00	2352.32	493.94
2	5054-03-337-0-17-160-(PLAN)-Renewals	12	1973.58	89.02	49.15	189.33	1530.25	311.32
3	5054-04-337-0-01-154-(PLAN)-Improvements	66	6146.30	149.86	23.80	496.79	5085.09	276.17
4	5054-04-337-0-01-160-(PLAN)-Renewals	46	2773.08	147.87	52.32	450.19	2187.10	319.02
	Total	**140**	**14806.11**	**460.50**	**156.57**	**1327.30**	**11154.77**	**1400.45**